# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2023-24ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ
## S.S.L.C. MODEL QUESTION PAPER – 2023-24

## ವಿಷಯ : ದ್ವಿತೀಯ ಭಾಷೆ — ಕನ್ನಡ
## Subject : Second Language — KANNADA

ಸಮಯ : 3 ಗಂಟೆ ] **ವಿಷಯ ಸಂಕೇತ : 33-K**

ಗರಿಷ್ಠ ಅಂಕಗಳು : 80 ] **Subject Code : 33-K**

**CCE-RF : ಶಾಲಾ ವಿದ್ಯಾರ್ಥಿಗಳು / Regular Fresh**

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 4 × 1 = 4**

1. ಆದೇಶ ಸಂಧಿಗೆ ಉದಾಹರಣೆಯಾಗಿರುವ ಪದ

   (ಎ) ಶಾಲೆಯಿಂದ

   (ಬಿ) ಬೇರೊಬ್ಬ

   (ಸಿ) ಗುರುವನ್ನು

   (ಡಿ) ಬೆಟ್ಟದಾವರೆ

2. ಜೋಡುನುಡಿಗೆ ಉದಾಹರಣೆಯಾಗಿರುವ ಪದ

   (ಎ) ಹುಳುಹುಪ್ಪಟೆ

   (ಬಿ) ಕತ್ತಿಮಸೆ

   (ಸಿ) ಹೊಚ್ಚ ಹೊಸದು

   (ಡಿ) ನಿಲ್ಲುನಿಲ್ಲು

3. ‘ಬಾಂದಳ’ ಪದದ ಅರ್ಥ

(ಎ) ಭೂಮಿ

(ಬಿ) ಸಮುದ್ರ

(ಸಿ) ಆಕಾಶ

(ಡಿ) ದೇವಲೋಕ

4. ‘ಕರ್ನಾಟಕ’ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(ಎ) ಭಾವನಾಮ

(ಬಿ) ಅಂಕಿತನಾಮ

(ಸಿ) ಅನ್ವರ್ಥನಾಮ

(ಡಿ) ರೂಢನಾಮ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 12 × 1 = 12**

5. ವಿಷದ ಬಾಣವು ಮರಕ್ಕೆ ಏಕೆ ತಗುಲಿತು ?

6. ಅಸಿ–ಮಸಿ ಎಂದರೇನು ?

7. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ ?

8. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು ?

9. ಗುರುರಾಜ ಕರ್ಜಗಿ ಅವರ ಅಂಕಣ ಬರಹದ ಶೀರ್ಷಿಕೆ ಯಾವುದು ?

10. ಥೇಮ್ಸ್ ನದಿ ದಡದಲ್ಲಿರುವ ಜನವಸತಿಯನ್ನು ಲೇಖಕರು ಯಾವುದಕ್ಕೆ ಹೋಲಿಸುತ್ತಾರೆ ?

11. ಗೋಪಾಲನು ಹೊಸ ಪಂಚೆಯನ್ನು ಬಯಸಿದುದೇಕೆ ?

12. ಬೋಧಿವೃಕ್ಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ ?

13. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ ?

14. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ ?

15. ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ ?

16. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8 × 2 = 16**

17. ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು ?

18. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ?

19. ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯಗಳನ್ನು ಬರೆಯಿರಿ.

20. ಚೈತ್ರದಲ್ಲಿ ಹಕ್ಕಿಗಳ ಕಲರವ ಹೇಗಿರುತ್ತದೆಂದು ಕವಿ ಬಸವರಾಜ ಸಾದರ ಅವರು ವರ್ಣಿಸಿದ್ದಾರೆ.

21. ಮಾನವನ ಬದುಕು ಕರ್ಪೂರದಂತೆ ಇರಬೇಕು. ಏಕೆ ?

22. ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತ್ತಿತ್ತೆಂದು ಜನಪದರು ಹೇಳಿದ್ದಾರೆ ?

23. 'ಕಳ್ಳರ ಗುರು' ಪಾಠದಿಂದ ನಾವು ಕಲಿತುಕೊಳ್ಳಬೇಕಾದ ವಿಚಾರಗಳೇನು ? ವಿವರಿಸಿ.

24. 'ಮನುಕುಲದ ಭವ್ಯ ಬದುಕು' ಯಾವ ರೀತಿ ಅರಳಬೇಕಿದೆ ಎಂದು ಕವಯಿತ್ರಿ ತಿಳಿಸಿದ್ದಾರೆ.

**IV. ಕೆಳಗಿನ ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 1 × 3 = 3**

25. ಸಿ.ಪಿ. ಕೃಷ್ಣಕುಮಾರ್

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ : 1 × 3 = 3**

26. ಕಾಡ ತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು
ಗೂಡಿನಲ್ಲಿ ಹಾಡು ಹುಟ್ಟಿ ಹೊಸರಾಗ ಕೇಳಿತು ।
ಮಕರಂದ ಸವಿಯಲೆಂದು ದುಂಬಿ ಹೂವ ಸೇರಿತು
ಗಿಡಗಿಡವೂ ಅಪ್ಪಿಕೊಂಡು ಕುಣಿಯುವಂತೆ ಕಂಡಿತು

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

27. "ಕೌರವನ ಸೇನೆಯು ಸಾಗರದಂತೆ ವಿಶಾಲವಾಗಿತ್ತು."

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3**

28. "ಬೆಳೆಯುವ ಸಿರಿ ಮೊಳಕೆಯಲ್ಲಿ."

**ಅಥವಾ**

"ಕೂಡಿ ಬಾಳಿದರೆ ಸ್ವರ್ಗಸುಖ."

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 5 × 3 = 15**

29. "ಇಂಥ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ ?"

30. "ನೀವೇ ಕಾಫೀ ಹಾಕಿಕೊಳ್ಳಿ, ಆಮೇಲೆ ಕುಳಿತು ಮಾತನಾಡೋಣ."

31. "ಆ ಗೋಪಾಲ ಕೊಡಬೇಕು, ನಾವು ಉಣಬೇಕು."

32. "ಒಂದು ಜೀವನಕೇಕೆ ಹಲವು ಸಾಧ್ಯಗಳು ?"

33. "ಎಮ್ಮರಮನೆಯ ನಾರಿಯರೆ ಸಾಕು."

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

34. ನೀರ ಕಂಡಲ್ಲಿ..................................................

...................................................................

...................................................................

......................................... ಕೂಡಲಸಂಗಮದೇವ.

**ಅಥವಾ**

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ

...................................................................

...................................................................

...................................................................

...................................................................

ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**X. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4**

35. 'ಕೃಷಿಕ ನಾಡಿನ ಬೆನ್ನೆಲುಬು' ಈ ಮಾತನ್ನು ನೀವು ಮೆಚ್ಚುವ ಅಂಶದೊಂದಿಗೆ ವಿವರಿಸಿ.

**ಅಥವಾ**

ದೇಶದ ಪ್ರಗತಿಯಲ್ಲಿ ಸಾಹಿತಿಗಳ ಪಾತ್ರವೇನು ಎಂಬುದನ್ನು ನಿಮ್ಮ ಮಾತುಗಳಲ್ಲಿ ಅರ್ಥಪೂರ್ಣವಾಗಿ ವಿವರಿಸಿ.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 × 4 = 4 ( 2 + 2 )**

36. ಗೌರಿಕುಂಡದಿಂದ ಕೇದಾರ ಹದಿನೈದು ಕಿಲೋಮೀಟರ್‌ಗಳ ದಾರಿ. ನಡೆದು ಹೋಗಬಹುದು; ಇಲ್ಲವೆ ಕುದುರೆ ಮೇಲೆ ಅಥವಾ ಕಂಡಿ ಮತ್ತು ದಂಡಿ ಎಂಬುದರಲ್ಲಿ ಹೋಗಬಹುದು. ದಂಡಿ ಎಂಬುದು ಕುರ್ಚಿಯ ಹಾಗೆ ಇದ್ದು ಅದಕ್ಕೆ ಎರಡು ಕಡೆಗಳಲ್ಲಿ ಉದ್ದವಾದ ದಂಡಿಗೆ ಇರುತ್ತದೆ. ನಾಲ್ಕು ಜನ ಹೊತ್ತುಕೊಂಡು ನಡೆಯುತ್ತಾರೆ. ಕಂಡಿ ಎಂಬುದು ಬುಟ್ಟಿಯ ಹಾಗೆ ಇರುತ್ತದೆ.

ಕೇದಾರದ ಏರುವೆಯ ದಾರಿ ಮಂದಾಕಿನೀ ನದಿಯ ಅಂಚಿನಲ್ಲೇ ಸಾಗುತ್ತದೆ. ಐದಾರು ಅಡಿ ಅಗಲದ ಚಿಕ್ಕದಾದ ದಾರಿ. ಒಂದು ಕಡೆ ತಲೆ ಎತ್ತಿ ನಿಂತ ಪರ್ವತ, ಮತ್ತೊಂದು ಕಡೆ ಪ್ರಪಾತ! ಅದರ ಆಚೆಗೆ ಬೃಹದಾಕಾರದ ಹಿಮ ಆವರಿಸಿದ ಬಿಳಿಯ ಬೆಟ್ಟ. ಅಲ್ಲಲ್ಲಿ ಕಣ್‌ತಣಿಸುವ ಹಸುರು. ಹಸುರಿನಲ್ಲಿ  ಎಷ್ಟು ಬಗೆ ಎಂಬುದನ್ನು ಅಲ್ಲಿ ನೋಡಬೇಕು. ಅಲ್ಲಲ್ಲಿ ಹಿಮಕರಗಿ ಹರಿದು ಬರುವ ಬಿಳಿಯ ಧಾರೆ. ಬಿಸಿಲಿಗೆ ಹೊಳೆಯುವ ಬೆಟ್ಟ ಕ್ಷಣಕ್ಕೊಂದು ರೂಪ, ಕ್ಷಣಕ್ಕೊಂದು ವಿನ್ಯಾಸ. ಎಂತಹ ಅದ್ಭುತ ಕಲಾಕಾರನಪ್ಪ ಈ ಪ್ರಕೃತಿ ಎಂಬ ವಿಸ್ಮಯ!

ಹಾಗೂ, ಹೀಗೂ ಏಳು ಕಿಲೋಮೀಟರ್ ನಡೆದು ಹೋದರೆ ರಾಮಬಾಡ. ಈ ದಾರಿ ಕೆಲವೆಡೆ ಎಷ್ಟು ಕಿರಿದೆಂದರೆ ಮೇಲಿನಿಂದ ಬರುವವರು, ಕೆಳಗಿನಿಂದ ಏರುವವರು,

ಕುದುರೆಗಳು, ದಂಡಿ, ಕಂಡಿಯವರು ಇವರೆಲ್ಲರ ಮಧ್ಯೆ ನುಸುಳಿ ಹೋಗುವುದು ನಿಜವಾಗಿ ಹರಸಾರವೇ ಸರಿ! ಸಾಧುಸಂತರು, ಹೆಂಗಸರು, ಗಂಡಸರು, ಮಕ್ಕಳು, ಮುದುಕರು, ಯುವಕರು, ವಿದೇಶಿಯರು, ಎಷ್ಟು ಭಾಷೆ! ಎಷ್ಟು ವೇಷ! ಮಿನಿ ವಿಶ್ವವನ್ನೇ ಕಂಡಂತೆ ಆಗುತ್ತದೆ. ರಾಮಬಾಡದಿಂದ ಸುಮಾರು ಒಂದು ಗಂಟೆ ಕುದುರೆ ಪ್ರಯಾಣ ಮಾಡಿದ ಮೇಲೆ ಗರುಡ ಚಟ್ಟೆ ಎಂಬ ಸಣ್ಣ ಹಳ್ಳಿ ಸಿಗುತ್ತದೆ. ಇಲ್ಲಿಂದ ಕೇದಾರಕ್ಕೆ ಕೇವಲ ಮೂರು ಕಿಲೋಮೀಟರ್ ದೂರ ಈ ಕೇದಾರ ಪರ್ವತ ಶ್ರೇಣಿಗಳನ್ನು ರುದ್ರ ಹಿಮಾಲಯ ಎನ್ನುತ್ತಾರೆ.

***ಪ್ರಶ್ನೆಗಳು :***

ಅ) ರಾಮಬಾಡ ಪ್ರದೇಶದ ಕಿರುದಾರಿಯನ್ನು 'ಮಿನಿವಿಶ್ವ'ವೆಂದು ಕರೆದುದು ಏಕೆ ?

ಆ) ಕೇದಾರ ಏರುವ ದಾರಿಯ ಪ್ರಕೃತಿ ವೈಭವ ಹೇಗಿದೆ ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ : 1 × 4 = 4**

37. ಜನಸಂಖ್ಯಾ ಸ್ಫೋಟ.

**ಅಥವಾ**

ಅರಣ್ಯ ಸಂರಕ್ಷಣೆಯ ಮಹತ್ವ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

38. ನಿಮ್ಮನ್ನು ದೊಡ್ಡಬೆಳವಂಗಲ ಗ್ರಾಮಪಂಚಾಯಿತಿಗೆ ಸೇರಿದ ಹಿರೇಮಳ್ಳೂರು ಗ್ರಾಮದ 'ಸುನಂದ' ಎಂದು ಭಾವಿಸಿಕೊಂಡು, ನಿಮ್ಮ ಗ್ರಾಮದ ರಸ್ತೆ ದುರಸ್ತಿ ಮಾಡುವಂತೆ ಕೋರಿ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ವಿಜಯಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ 'ನಿರಂಜನ' ಎಂದು ಭಾವಿಸಿಕೊಂಡು, ನಿಮ್ಮ ಶಾಲಾ ಪ್ರವಾಸಕ್ಕಾಗಿ ಹಣವನ್ನು ಕಳುಹಿಸಿಕೊಡುವಂತೆ ಕೋರಿ ತುಮಕೂರಿನ ಬಸವೇಶ್ವರ ನಗರದ ನಿವಾಸಿಯಾದ 'ರಾಜೇಂದ್ರ' ಎಂಬ ಹೆಸರಿನ ತಂದೆಯವರಿಗೊಂದು ಪತ್ರವನ್ನು ಬರೆಯಿರಿ.

DO NOT WRITE ANYTHING HERE